# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

Email id : aeersdglb@gmail.com
Mobile No:9448359025

**ಕಛೇರಿ**
**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)**
**ಕಾ. ಮತ್ತು ಪಾ. ಗ್ರಾಮೀಣ ಉಪ-ವಿಭಾಗ**
**ಗು.ವಿ.ಸ.ಕಂ.ನಿ ಕಲಬುರಗಿ.**

ಸಂ: ಸಕಾನಿಅ/ಸಅ(ತಾ)/ಗ್ರಾ.ಉ.ವಿ/ಕ/2021-22/ಎಫ್-19/9136-9148 ದಿನಾಂಕ: 17.12.2021

ಕಾರ್ಯ ಮತ್ತು ಪಾಲನೆ, ಗ್ರಾಮೀಣ ಉಪ ವಿಭಾಗದಲ್ಲಿ ಗ್ರಾಹಕರ ಸಂವಾದ ಸಭೆ ಹಾಗೂ ಕಾರ್ಯಕ್ಷಮತೆಯ ಗುಣಮಟ್ಟವನ್ನು (ಎಸ್.ಓ.ಪಿ) ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ, ಗುವಿಸಕಂನಿ, ಕಲಬುರಗಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ 17.12.2021 ರಂದು ಬೆಳಗ್ಗೆ 11:00 ಗಂಟೆಯಿಂದ ಸುಮಾರು 01:00 ಗಂಟೆಯ ವರೆಗೆ ಗ್ರಾಹಕರ ಜೊತೆ ಜರುಗಿದ ಸಂವಾದ ಸಭೆ (Consumer interaction meeting) ನಡುವಳಿಗಳು.

**ಮಾನ್ಯರೆ,**

ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ, ಗುವಿಸಕಂನಿ, ಕಲಬುರಗಿ ರವರ ಅಧ್ಯಕ್ಷತೆಯಲ್ಲಿ ಕಾರ್ಯ ಮತ್ತು ಪಾಲನೆ, ಗ್ರಾಮೀಣ ಉಪ ವಿಭಾಗ ಗುವಿಸಕಂನಿ, ಕಲಬುರಗಿಯಲ್ಲಿ ದಿನಾಂಕ: 17.12.2021 ರಂದು ಗ್ರಾಹಕರ ಸಂವಾದ ಸಭೆ (Consumer interaction meeting) ಏರ್ಪಡಿಸಲಾಗಿದ್ದು, ಸಭೆಗೆ ಹಾಜರಾದ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ಗ್ರಾಮೀಣ ವಿಭಾಗ-1, ಗುವಿಸಕಂನಿ, ಕಲಬುರಗಿ, ಕಾರ್ಯನಿರ್ವಾಹಕ ಅಭಿಯಂತರರು(ವಿ), ಆರ್.ಎ ಶಾಖೆ, ನಿಗಮ ಕಛೇರಿ ಕಲಬುರಗಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಎಲ್.ಟಿ ರೇಟಿಂಗ್, ಗ್ರಾಮೀಣ ಉಪ ವಿಭಾಗ, ಗುವಿಸಕಂನಿ, ಕಲಬುರಗಿ ಹಾಗೂ ಸಹಾಯಕ ಅಭಿಯಂತರರು(ತಾಂತ್ರಿಕ), ಸಹಾಯಕ ಲೆಕ್ಕಾಧಿಕಾರಿ, ಹಿರಿಯ ಸಹಾಯಕ, ಶಾಖಾಧಿಕಾರಿಗಳು ಹಾಗೂ ಗ್ರಾಹಕರನ್ನು ಸ್ವಾಗತಿಸಿ ಕುಂದು ಕೊರತೆಗಳ ಬಗ್ಗೆ ಚರ್ಚಿಸಿದ ನಡುವಳಿಗಳು ಈ ಕೆಳಗಿನಂತಿರುತ್ತವೆ.

1. **ಶ್ರೀ. ನೀಲಕಂಠ ಪಾಟೀಲ ಮು: ಪಟ್ಟಣ. ಮೊ.ಸಂಖ್ಯೆ: 9008603110.**

ಶ್ರೀ. ನೀಲಕಂಠ ಪಾಟೀಲ ಮು: ಪಟ್ಟಣ ರವರು ತಮ್ಮ ಗ್ರಾಮದಲ್ಲಿ ವಿದ್ಯುತ್ ಸರಬರಾಜು ತುಂಬಾ ಅಡಚಣೆವಾಗುತ್ತಿದ್ದು ಹಾಗೂ ಅನಧೀಕೃತ ವಿದ್ಯುತ್ ಸಂಪರ್ಕಗಳು, ಪರಿವರ್ತಕಗಳು ಅತೀ ಹೆಚ್ಚು ಭಾರ ಹೊಂದಿರುತ್ತವೆ, ಕಂಬಗಳು ಬಾಗಿರುತ್ತವೆ, ಹೆಚ್.ಟಿ ಹಾಗೂ ಎಲ್.ಟಿ ಕ್ರಾಸಿಂಗ್‌ಗಳಾಗಿದ್ದು ಅದನ್ನು ಬದಲಾವಣೆ ಮಾಡಿ ಎಬಿಸಿ ಕೇಬಲ್ ಅಳವಡಿಸಲು ಮತ್ತು ಎಲ್ಲಾ ಫೀಡರ್ ಹಾಗೂ ಮಾರ್ಗಗಳ ನಿರ್ವಹಣೆ ಮಾಡಲು ತಿಳಿಸಿರುತ್ತಾರೆ. ಸದರಿಯವರ ಆರ್.ಆರ್ ಸಂಖ್ಯೆ PLIP-86 ಇರುತ್ತದೆ.

ಸದರಿ ವಿಷಯದ ಬಗ್ಗೆ ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ, ಗುವಿಸಕಂನಿ, ಕಲಬುರಗಿ ರವರು ಕುಲಂಕುಷವಾಗಿ ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ಸಲ್ಲಿಸಲು ಹಾಗೂ ಎಲ್ಲಾ ಶಾಖಾಧಿಕಾರಿಗಳಿಗೆ ಪ್ರತಿ ತಿಂಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಡಚಣೆ ಇರುವ ಫೀಡರ್‌ಗಳ ಕಾರ್ಯ ನಿರ್ವಹಣೆ ಮಾಡಲು ಹಾಗೂ ಸದರಿ ಶಾಖಾಧಿಕಾರಿ ಉತ್ತರ ಶಾಖೆ ರವರಿಗೆ ತಿಳಿಸಲಾಯಿತು.

2. **ಶ್ರೀ. ಈಶ್ವರಪ್ಪ ತಂದೆ ದಂಡಪ್ಪ ಮು: ಹೇರೂರ. ಮೊ. ಸಂಖ್ಯೆ: 9972080806.**

ಶ್ರೀ. ಈಶ್ವರಪ್ಪ ತಂದೆ ದಂಡಪ್ಪ ಮು: ಹೇರೂರ ರವರು ತಮ್ಮ ಗ್ರಾಮದ 25 ಕೆ.ವ್ಹಿ.ಎ ಪರಿವರ್ತಕವು ಅತೀ ಭಾರವಾಗಿರುವುದರಿಂದ ಮೋಟರ್‌ಗಳು ಸರಿಯಾಗಿ ನಡೆಯುತ್ತಿಲ್ಲ ಎಂದು ತಿಳಿಸಿರುತ್ತಾರೆ ಹಾಗೂ ಶಾಖಾಧಿಕಾರಿ ಫರತಾಬಾದ ಶಾಖೆ ರವರು ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಿರುತ್ತಾರೆ. ಆದರೆ ವಿಭಾಗೀಯ ಕಛೇರಿಯಿಂದ ಕೆಲವು ನ್ಯೂನತೆಗಳು ಇರುವುದರಿಂದ ಮರಳಿ ಸಲ್ಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಇದರಿಂದ ನಮಗೆ ಸರಿಯಾದ ರೀತಿಯಲ್ಲಿ ಓಲ್ಟೇಜ್ ಬರುತ್ತಿಲ್ಲವೆಂದು ತಿಳಿಸಿರುತ್ತಾರೆ. ಸದರಿಯವರ ಆರ್.ಆರ್ ಸಂಖ್ಯೆ HRRIP-62726, 52726, MNLIP-43076, 43071 ಇರುತ್ತವೆ.

ಸದರಿ ವಿಷಯದ ಬಗ್ಗೆ ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ, ಗುವಿಸಕಂನಿ, ಕಲಬುರಗಿ ರವರು ಕುಲಂಕುಷವಾಗಿ ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಿ ನ್ಯೂನತೆಗಳನ್ನು ಸರಿಪಡಿಸಿ ಮರು ಅಂದಾಜು ಪಟ್ಟಿ ಸಲ್ಲಿಸಲು ಶಾಖಾಧಿಕಾರಿ ಫರತಾಬಾದ ಶಾಖೆ ರವರಿಗೆ ತಿಳಿಸಲಾಯಿತು.

**ಪು.ತಿ.ನೋ.**

3. **ಶ್ರೀ. ಸ್ವಾಮಿ ನಂದಿಕೂರ (ಕೈಗಾರೀಕಾ ಸಂಘಟನಾ ಕಾರ್ಯದರ್ಶಿ) ಮು: ಬೇಲೂರ.**

ಶ್ರೀ. ಸ್ವಾಮಿ ನಂದಿಕೂರ (ಕೈಗಾರೀಕಾ ಸಂಘಟನಾ ಕಾರ್ಯದರ್ಶಿ) ಮು: ಬೇಲೂರ ರವರು ತಮ್ಮ ಗ್ರಾಮದಲ್ಲಿ ವಿದ್ಯುತ್ ಸರಬರಾಜು ತುಂಬಾ ಅಡಚಣೆವಾಗುತ್ತಿದ್ದು ಇದರಿಂದ ಕೈಗಾರೀಕಾ ಗ್ರಾಹಕರವರಿಗೆ ವಿದ್ಯುತ್ ಅನೀರಿಕ್ಷಿತ ಹಾಗೂ ನಿರಿಕ್ಷಿತ ಸಮಯದಲ್ಲಿ ಕೈಗಾರೀಕಾ ಸಾಮಾಗ್ರಿಗಳು ಜಾಮ / ಸ್ಟ್ರಕ್ ಆಗಿ ಅದನ್ನು ಸರಿಪಡಿಸಲು ಸುಮಾರು ಗಂಟೆಗಳ ಕಾಲ ಸಮಯ ವ್ಯರ್ಥ ಹಾಗೂ ಸಾಮಾಗ್ರಿಗಳು ನಷ್ಟವಾಗುತ್ತಿರುವುದರಿಂದ ಹಾಗೂ ಈ ಕೆಳಕಂಡ ಸಮಸ್ಯೆಗಳನ್ನು ತಿಳಿಸಿರುತ್ತಾರೆ.

1. ಅನಧೀಕೃತ ವಿದ್ಯುತ್ ಸಂಪರ್ಕಗಳು.
2. ಪರಿವರ್ತಕಗಳು ಅತೀ ಹೆಚ್ಚು ಭಾರ ಹೊಂದಿರುತ್ತವೆ.
3. ಪರಿವರ್ತಕಗಳಿಗೆ ಸರಿಯಾದ ರೀತಿಯಲ್ಲಿ ಲಗ್ಗ, ಪಿ.ಜಿ. ಕ್ಲ್ಯಾಂಪ್, ಸುಟ್ಟಿರುವ ಕೇಬಲ್‌ಗಳನ್ನು ಕಳಚಿ ಹೊಸ ಕೇಬಲ್‌ಗಳನ್ನು ಅಳವಡಿಸಲು ತಿಳಿಸಿರುತ್ತಾರೆ.
4. ಜಿ.ಓ.ಎಸ್ ಯನ್ನು ಅಳವಡಿಸಲು ಹಾಗೂ ಎಲ್.ಸಿ ಯನ್ನು ಮಿತಗೊಳಿಸಲು ತಿಳಿಸಿರುತ್ತಾರೆ.
5. ಆದಷ್ಟು ಕೈಗಾರೀಕಾ ಫೀಡರ್‌ಗಳಿಗೆ ಎಲ್.ಸಿ ಗಳನ್ನು ಮಿತಗೊಳಿಸಿ ಕೇವಲ ಜಿ.ಓ.ಎಸ್ ಗಳನ್ನು ಆಪರೇಟ ಮಾಡಿ ಕೆಲಸ ಮಾಡಲು ಸಂಬಂಧಪಟ್ಟ ಎಲ್ಲಾ ಕೈಗಾರೀಕಾ ಶಾಖಾಧಿಕಾರಿಗಳಿಗೆ ತಿಳಿಸಲು ಕೋರಿರುತ್ತಾರೆ.
6. ಕಂಬಗಳು ಬಾಗಿರುತ್ತವೆ.
7. ಹೆಚ್.ಟಿ ಹಾಗೂ ಎಲ್.ಟಿ ಕ್ರಾಸಿಂಗ್‌ಗಳಾಗಿದ್ದು ಅದನ್ನು ಬದಲಾವಣೆ ಮಾಡಿ ಎಬಿಸಿ ಕೇಬಲ್ ಅಳವಡಿಸಲು ತಿಳಿಸಿರುತ್ತಾರೆ.
8. ಕೈಗಾರೀಕಾ, ಕೆ.ಐ.ಎ.ಡಿ.ಬಿ ಫೀಡರ್ ಹಾಗೂ ಮಾರ್ಗಗಳ ನಿರ್ವಹಣೆ ಮಾಡಲು ತಿಳಿಸಿರುತ್ತಾರೆ.

ಮುಂದುವರೆದು ಈ ಮೇಲ್ಕಂಡ ವಿಷಯಗಳೊಂದಿಗೆ ಸದರಿಯವರು ಕೈಗಾರೀಕಾ ಸ್ಥಾವರಗಳು ಬಹು ಕಾಲಗಳಿಂದ ಕೊರೋನಾ ನಿಮಿತ ಬಹಳಷ್ಟು ಕಾರ್ಖಾನೆಗಳು ನಿಲುಗಡೆಗೊಂಡಿರುತ್ತವೆ ಹಾಗೂ ನಷ್ಟದಲ್ಲಿ ಇರುತ್ತವೆ. ಆದ್ದರಿಂದ ಸದರಿಯವರು ಸದರಿ ಗ್ರಾಹಕರ ಪರವಾಗಿ ಬಹುಕಾಲದಿಂದ ಉಳಿದುಕೊಂಡಿರುವ ಜೆಸ್ಕಾಂ ಬಿಲ್ಲನ್ನು ಕೆಲವು ಕಂತುಗಳಲ್ಲಿ ನೀಡಲು ಹಾಗೂ ತಕ್ಷಣವೇ ವಿದ್ಯುತ್ ಬಿಲ್ ಬಾಕಿ ಇದ್ದಲ್ಲಿ ವಿದ್ಯುತ್ ಸಂಪರ್ಕ ನಿಲುಗಡೆ ಮಾಡದೇ ಇರಲು ಕೊರಿರುತ್ತಾರೆ.

ಸದರಿ ವಿಷಯದ ಬಗ್ಗೆ ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ, ಗುವಿಸಕಂನಿ, ಕಲಬುರಗಿ ರವರು ಕುಲಂಕುಷವಾಗಿ ಪರಿಗಣಿಸಿ ಕೈಗಾರೀಕಾ ಫೀಡರ್‌ಗಳಿಗೆ ಅಡಚಣೆ ರಹಿತ ವಿದ್ಯುತ್ ಸರಬರಾಜು ಮಾಡಲು ಸ್ಥಳ ಪರಿಶೀಲಿಸಿ ಬೇಕಾಗಿರುವ ಸಾಮಾಗ್ರಿಗಳ ತಖ್ತೆ ಮಾಡಿ ಅಂದಾಜು ಪಟ್ಟಿ ಸಲ್ಲಿಸಲು ತಿಳಿಸಿದರು.

ಮುಂದುವರೆದು ಎಲ್ಲಾ ಶಾಖಾಧಿಕಾರಿಗಳಿಗೆ ಪ್ರತಿ ತಿಂಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಡಚಣೆ ಇರುವ ಫೀಡರ್‌ಗಳ (ಕೈಗಾರೀಕಾ, ಎನ್.ಜೆ.ವಾಯ್, ಅರ್ಬನ್, ವಾಟರ್ ಸಪ್ಲೈ, ಗ್ರಾಮೀಣ ಹಾಗೂ ಐ.ಪಿ ಸೆಟ್ ಫೀಡರ್‌ಗಳಿಗೆ) ಆಧ್ಯತೆ ಮೇರೆಗೆ ಕಾರ್ಯ ನಿರ್ವಹಣೆ ಮಾಡಲು ಎಲಾ ಶಾಖಾಧಿಕಾರಿಗಳಗೆ ತಿಳಿಸಲಾಯಿತು.

4. **ಶ್ರೀ. ಸೈಯದ ಝಾಕೀರ ಹುಸೇನ್ ಮು: ಕೇರೂರ ಆರ್.ಆರ್. ಸಂಖ್ಯೆ: KRR-52158, 52159 ಹಾಗೂ ಶ್ರೀ. ಬಸವರಾಜ ಶಟ್ಟಗಾರ ಮು: ಹರಸೂರ ಆರ್.ಆರ್. ಸಂಖ್ಯೆ: HR-34957.**

ಶ್ರೀ. ಸೈಯದ ಝಾಕೀರ ಹುಸೇನ್ ಆರ್.ಆರ್. ಸಂಖ್ಯೆ: KRR-52158, 52159 ಡಾಂಬರ ಪ್ಲ್ಯಾಂಟ್ ಲೇಬರ್ ಕ್ವಾಟರ್ಸ್ ಹತ್ತಿರ ಮು: ಕೇರೂರ ರವರು ತಮ್ಮ ಸ್ಥಾವರಕ್ಕೆ ನಿರಂತರ ವಿದ್ಯುತ್ ಸರಬರಾಜು ನೀಡುತ್ತಿಲ್ಲ ಹಾಗೂ ಪ್ರಸ್ತುತ ಐ.ಪಿ ಸೆಟ್ಟ ಫೀಡರ್ ಮೇಲೆ ತಮ್ಮ ಸ್ಥಾವರವನ್ನು ಸಂಪರ್ಕ ನೀಡಿರುತ್ತಾರೆ. ಸದರಿ ವಿಷಯದ ಬಗ್ಗೆ ಹಲವು ಸಲ ಶಾಖಾಧಿಕಾರಿಗೆ ಹಾಗೂ ಮೇಲಾಧಿಕಾರಿಗೆ ತಿಳಿಸಿದರು ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಸದರಿ ಸ್ಥಾವರಕ್ಕೆ ಐ.ಪಿ ಸೆಟ್ ಫೀಡರ್‌ದಿಂದ ಎನ್.ಜೆ.ವಾಯ್ ಫೀಡರ್ ಮೇಲೆ ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ.

ಮುಂದುವರೆದು ಅದರಂತೆ ಶ್ರೀ. ಬಸವರಾಜ ಶಟ್ಟಗಾರ ಆರ್.ಆರ್. ಸಂಖ್ಯೆ: HR-34957 ಮು: ಹರಸೂರ ರವರು ತಮ್ಮ ಸ್ಥಾವರಕ್ಕೆ ನಿರಂತರ ವಿದ್ಯುತ್ ಸರಬರಾಜು ನೀಡುತ್ತಿಲ್ಲ ಹಾಗೂ ಪ್ರಸ್ತುತ ಐ.ಪಿ ಸೆಟ್ಟ ಫೀಡರ್ ಮೇಲೆ ತಮ್ಮ ಸ್ಥಾವರವನ್ನು ಸಂಪರ್ಕ ನೀಡಿರುತ್ತಾರೆ. ಸದರಿ ವಿಷಯದ ಬಗ್ಗೆ ಹಲವು ಸಲ ಶಾಖಾಧಿಕಾರಿಗೆ ಹಾಗೂ ಮೇಲಾಧಿಕಾರಿಗೆ ತಿಳಿಸಿದರು ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಸದರಿ ಸ್ಥಾವರಕ್ಕೆ ಐ.ಪಿ ಸೆಟ್ ಫೀಡರ್‌ದಿಂದ ಎನ್.ಜೆ.ವಾಯ್ ಫೀಡರ್ ಮೇಲೆ ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ.

**ಪು.ತಿ.ನೋ.**

ಸದರಿ ವಿಷಯದ ಬಗ್ಗೆ ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ, ಗುವಿಸಕಂನಿ, ಕಲಬುರಗಿ ರವರು ಕುಲಂಕುಷವಾಗಿ ಪರಿಗಣಿಸಿ ಸದರಿ ಗ್ರಾಹಕರಿಗೆ ಬಹಳಷ್ಟು ಯೋಜನೆ ಅಡಿಯಲ್ಲಿ ಸದರಿ ಸ್ಥಾವರಕ್ಕೆ ಐ.ಪಿ ಸೆಟ್ ಫೀಡರ್‌ದಿಂದ ಎನ್.ಜೆ.ವಾಯ್ ಫೀಡರ್ ಮೇಲೆ ವಿದ್ಯುತ್ ಸಂಪರ್ಕ ನೀಡಲು ಕ್ರಮ ಕೈಗೊಳ್ಳಬಹುದಾಗಿತ್ತು. ಆದರೆ ಏಕೆ ಕ್ರಮ ಕೈಗೊಂಡಿಲ್ಲವೆಂದು ತಿಳಿಸಿ ಬೇರೆ ಯೋಜನೆ ಅಡಿಯಲ್ಲಿ ಅಡಚಣೆ ರಹಿತ ವಿದ್ಯುತ್ ಸರಬರಾಜು ಮಾಡಲು ಸ್ಥಳ ಪರಿಶೀಲಿಸಿ ಬೇಕಾಗಿರುವ ಸಾಮಾಗ್ರಿಗಳ ತಖ್ತೆ ಮಾಡಿ ಅಂದಾಜು ಪಟ್ಟಿ ಸಲ್ಲಿಸಲು ತಿಳಿಸಿದರು.

5. **ಶ್ರೀ. ಶಾಂತಪ್ಪ ಪೂಜಾರಿ ಮತ್ತು ಶ್ರೀ. ಸುನೀಲ ಕಟ್ಟಿಮನಿ ಮು: ಬೋಳೆವಾಡ. ಮೊ. ಸಂಖ್ಯೆ: 7353849811, 9945895403**.

ಶ್ರೀ. ಶಾಂತಪ್ಪ ಪೂಜಾರಿ ಮತ್ತು ಶ್ರೀ. ಸುನೀಲ ಕಟ್ಟಿಮನಿ ಮು: ಬೋಳೆವಾಡ ಗ್ರಾಮದಲ್ಲಿ ಪ್ರಸ್ತುತ ಐ.ಪಿ ಸೆಟ್ 63 ಕೆ.ವ್ಹಿ.ಎ ಪರಿವರ್ತಕ ಇದ್ದು, ಸದರಿ ಪರಿವರ್ತಕದ ಮೇಲೆ ಸುಮಾರು ಅಧೀಕೃತ ಹಾಗೂ ಅನಾಧಿಕೃತ 19 ಸಂಖ್ಯೆಯ ಐ.ಪಿ ಸೆಟ್ ಸ್ಥಾವರಗಳು ಇದ್ದು, ಇದರಿಂದ ತಮ್ಮ ಸ್ಥಾವರಕ್ಕೆ ಗುಣಮಟ್ಟದ ವಿದ್ಯುತ್ ಸರಬರಾಜು ಹಾಗೂ ಓಲ್ಟೇಜ್ ಬರುತ್ತಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಸದರಿ ಪರಿವರ್ತಕ ಮೇಲೆ ಆರ್.ಆರ್ ಸಂಖ್ಯೆ BLDIP-21961, 40118, 33380, 49356, 63624, 31704, 4029, 49911, 54970, 59866, 26383, 59873, 61847, 29902, BLDIP-37, 38, 61, 65 ಇರುತ್ತವೆ ಎಂದು ತಿಳಿಸಿರುತ್ತಾರೆ. ಆದರೆ ಇಲ್ಲಿಯವರೆಗೆ ನನಗೆ ಯಾವುದೇ ತರಹದ ಮೂಲ ಸೌಕರ್ಯ ಅಥವಾ ಪರಿವರ್ತಕ ಅಳವಡಿಸಿರುವುದಿಲ್ಲ. ಆದ್ದರಿಂದ ಸದರಿ ವಿಷಯದ ಬಗ್ಗೆ ಹಲವಾರು ಸಭೆಯಲ್ಲಿ ಕ್ರಮ ಕೈಗೊಳ್ಳಲು ತಿಳಿಸಿರುತ್ತಾನೆ.

ಆದ್ದರಿಂದ ಸದರಿ ವಿಷಯವನ್ನು ಅತೀ ಜರೂರು ಎಂದು ಪರಿಗಣಿಸಿ ಸದರಿ ವಿಷಯದ ಬಗ್ಗೆ ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ, ಗುವಿಸಕಂನಿ, ಕಲಬುರಗಿ ರವರು ಕುಲಂಕುಷವಾಗಿ ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ಸಲ್ಲಿಸಲು ಶಾಖಾಧಿಕಾರಿ ದಕ್ಷಿಣ ಶಾಖೆ ರವರಿಗೆ ತಿಳಿಸಲಾಯಿತು.

ಮುಂದುವರೆದು ಕಾರ್ಯನಿರ್ವಾಹಕ ಅಭಿಯಂತರರು(ವಿ), ಆರ್.ಎ ಶಾಖೆ, ನಿಗಮ ಕಛೇರಿ ಕಲಬುರಗಿ ರವರು ಮಾನ್ಯ ಅಧೀಕ್ಷಕ ಅಭಿಯಂತರರು(ವಿ) ವೃತ್ತ ರವರಿಗೆ ಹಾಗೂ ಕಾರ್ಯನಿರ್ವಾಕ ಅಭಿಯಂತರರು(ವಿ), ಗ್ರಾಮೀಣ ವಿಭಾಗ–1 ರವರಿಗೆ ನಮಸ್ಕರಿಸಿ ಈ ಕೆಳಕಂಡ ಕಾರ್ಯಕ್ಷಮತೆಯ ಗುಣಮಟ್ಟ ಬಗ್ಗೆ ಸಂಕ್ಷೀಪ್ತವಾಗಿ ತಿಳಿಸಿದರು.

1. ಫ್ಯೂಸ್ ಜೋಡಣೆ
2. ವಿದ್ಯುತ್ ಮಾರ್ಗದ ತೊಂದರೆ
3. ಪರಿವರ್ತಕ ಬದಲಾವಣೆ
4. ತಾಂತ್ರಿಕ ಕಾರಣಗಳಿಂದಾಗಿ ವಿದ್ಯುತ್ ಪೂರೈಕೆ ಕಡಿತಗೊಂಡ ಸಂದರ್ಭಗಳಲ್ಲಿ ಮರು ಪೂರೈಕೆ ಅವಧಿ
5. ಓಲ್ಟೇಜಿನಲ್ಲಿ ವ್ಯತ್ಯಾಸ
6. ಹೊಸ ಸಂಪರ್ಕ ಹಾಗೂ ಹೆಚ್ಚುವರಿ ಭಾರ ಮಂಜೂರಿಗಾಗಿ ಅರ್ಜಿ
7. ಗ್ರಾಹಕರ ಹೆಸರು ಬದಲಾವಣೆ
8. ಎಲ್.ಟಿ ಸಿಂಗಲ್ ಫೇಸ್‌ದಿಂದ ತ್ರಿಫೇಸ್ಗೆ ಬದಲಾವಣೆ ಹಾಗೂ ಎಲ್.ಟಿಯಿಂದ ಹೆಚ್.ಟಿ ಅಥವಾ ಹೆಚ್.ಟಿಯಿಂದ ಎಲ್.ಟಿ ಬದಲಾವಣೆ
9. ಬಿಲ್ಲಿನಲ್ಲಿರುವ ದೋಷ ನಿವಾರಣೆಗಾಗಿ ನೀಡಿರುವ ದೂರು
10. ವಿದ್ಯುತ್ ಪೂರೈಕೆ ಕಡಿತದ ನಂತರ ಮರು ಸಂಪರ್ಕ
11. ವಿದ್ಯುತ್ ಅಪಘಾತಗಳ ಸಂದರ್ಭದಲ್ಲಿ ನಷ್ಟ ಭರ್ತಿ ವಾಪಾಸ
12. ಠೇವಣಿ ಮರು ಪಾವತಿ
13. ದೃಡೀಕರ ಪತ್ರ ನೀಡುವುದು




CONSUMER INTERACTION MEETING






ಗ್ರಾಹಕರ ಸಂವಾದ ಸಭೆ
CONSUMER INTERACTION MEETING


ಗ್ರಾಹಕರ ಸಂವಾದ ಸಭೆ
CONSUMER INTERACTION MEETING




ಗ್ರಾಹಕರ ಸಂವಾದ ಸಭೆ
CONSUMER INTERACTION MEETING





















ಈ ಮೇಲಿನ ಎಲ್ಲಾ ವಿಷಯಗಳನ್ನು ಚರ್ಚಿಸಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗ
ಗು.ವಿ.ಸ.ಕಂ.ನಿ ಕಲಬುರಗಿ.

**ಪ್ರತಿಗಳು ದಯಾಪರ ಮಾಹಿತಿಗಾಗಿ:**

1. ಮುಖ್ಯ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ವಲಯ ಕಛೇರಿ, ಗುವಿಸಕಂನಿ, ಕಲಬುರಗಿ.
2. ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ, ಗುವಿಸಕಂನಿ, ಕಲಬುರಗಿ.
3. ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ, ಗ್ರಾಮೀಣ ವಿಭಾಗ–1, ಗುವಿಸಕಂನಿ, ಕಲಬುರಗಿ.

**ಪ್ರತಿಗಳು:**

1. ಶಾಖಾಧಿಕಾರಿಗಳು, ಉತ್ತರ, ದಕ್ಷಿಣ, ಫರತಾಬಾದ, ಕೋಟನೂರ(ಡಿ), ಹಡಗಿಲ್ ಹಾರುತಿ, ಜಂಬಗಾ, ಶಾಖೆ, ಕಾರ್ಯ ಮತ್ತು ಪಾಲನೆ, ಗ್ರಾಮೀಣ ಉಪ ವಿಭಾಗ, ಗುವಿಸಕಂನಿ, ಕಲಬುರಗಿ. ಸೂಕ್ತ ಅಂದಾಜು ಪಟ್ಟಿಗಳನ್ನು ಮಂಜೂರಾತಿಗಾಗಿ ಸಲ್ಲಿಸುವ ಕುರಿತು.
   ಕಛೇರಿ ಪ್ರತಿ/ಸಅ(ತಾ)/ಸಲೆಅ

This document was created with the Win2PDF “print to PDF” printer available at
http://www.win2pdf.com

This version of Win2PDF 10 is for evaluation and non-commercial use only.

This page will not be added after purchasing Win2PDF.

http://www.win2pdf.com/purchase/